

ಭಾರತದಲ್ಲೀಗ 2220ಕ್ಕೂ ಹೆಚ್ಚು ಹುಲಿಗಳಿವೆ ಎನ್ನಲಾಗುತ್ತಿದೆ. ನಾಲ್ಕು ವರ್ಷಗಳ ಹಿಂದೆ 1200 ಇದ್ದದ್ದು ಈಗ ಒಮ್ಮೆಲೆ ಇಷ್ಟೊಂದು ಹೆಚ್ಚಾಗಲು ಕಾರಣಗಳೇನು? ಈ ಹೆಚ್ಚುತ್ತಿರುವ ಸಂಖ್ಯೆಯೇ ಹೆಚ್ಚಿನ ಸಾವಿಗೂ ಕಾರಣವೆ? ಹುಲಿಗಳ ಜತೆಗಿನ ಮಾನವ ಸಂಘರ್ಷವನ್ನು ತಪ್ಪಿಸುವುದು ಹೇಗೆ?

★ ನೇಸರ ಕಾಡನಕುಪ್ಪೆ

ಮೈಸೂರಿನಲ್ಲಿ ಒಂದೇ ತಿಂಗಳಿನಲ್ಲಿ ಹುಲಿಗಳ ಸರಣಿ ಸಾವಾಗಿದೆ. ಹುಲಿಗಳು ಊರಿಗೆ ಬರುವುದು, ಮನುಷ್ಯನ ಮೇಲೆ ದಾಳಿ ಮಾಡುವುದು, ಸಾಕುಪ್ರಾಣಿಗಳನ್ನು ಹೊತ್ತೊಯ್ಯುವುದು ಆಗಾಗ ವರದಿಯಾಗುತ್ತಲೇ ಇರುತ್ತವೆ. ಕಾಡುಪ್ರಾಣಿಗಳು ಕಾಡನ್ನು ಬಿಟ್ಟು ಊರಿಗೆ ಬರುವುದು ಏಕೆ? ವನ್ಯಜೀವಿ ಮತ್ತು ಮನುಷ್ಯನ ನಡುವೆ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚುತ್ತಿದೆಯೇ? ಈ ಸಮಸ್ಯೆಗೆ ಏನಾದರೂ ಪರಿಹಾರ ಇದೆಯೇ?

ಹುಲಿಗಳ ಸಾವಿನ ಸುದ್ದಿ ಮಾಧ್ಯಮಗಳಲ್ಲಿ ದೊಡ್ಡದಾಗಿ ವರದಿಯಾಗುತ್ತದೆ. ಆದರೆ, ಇತರ ವನ್ಯಜೀವಿಗಳ ಸಾವಿನ ಬಗ್ಗೆ ಯಾರೂ ತಲೆ ಕೆಡಿಸುವುದಿಲ್ಲವೇಕೆ? 'ಹುಲಿಗಳ ಸಂಖ್ಯೆ ಹೆಚ್ಚಾಗಿದೆ' ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಹೇಳುತ್ತದೆ. ಆದರೆ, ನಿಜಕ್ಕೂ ಈ ಸಂಖ್ಯೆ ನಿಖರವೇ ಅಥವಾ ಕೇವಲ ಸಂಖ್ಯೆ ಹೆಚ್ಚಳವನ್ನೇ ಮುಂದಿಟ್ಟುಕೊಂಡು ಅದನ್ನು ಸಾಧನೆ ಎಂದು ಬಿಂಬಿಸಬೇಕೆ? ಇರುವ ಎಲ್ಲ ಹುಲಿಗಳ ಭವಿಷ್ಯವೇನು?– ಹೀಗೆ, ಅಸಂಖ್ಯ ಪ್ರಶ್ನೆಗಳು ಹುಲಿಯ ಸಾವಿನ ಸುತ್ತ ಹುಟ್ಟಿಕೊಳ್ಳುತ್ತಿವೆ. ಹುಲಿಯ ಸಾವಿನ ಸುತ್ತ ಹೆಣೆದುಕೊಂಡಿರುವ ಈ ಜಾಲವನ್ನು ಬಿಡಿಸಿದಷ್ಟೂ ಸಮಸ್ಯೆ ಮತ್ತಷ್ಟು ಗೋಜಲಾಗುತ್ತಿದೆ.

## ಹೀಗೊಂದು ಎತ್ತರದ ಸ್ಥಾನ

ಯಾವ ಪ್ರಾಣಿಗೂ ಸಿಗದೇ ಇರುವ ಮಹತ್ವದ ಸ್ಥಾನ ಹುಲಿಗೇ ಸಿಕ್ಕಿರಲು ಕಾರಣವೇನಿರಬಹುದು? ಮಾನವ ಇತಿಹಾಸವನ್ನು ಒಮ್ಮೆ ಅವಲೋಕಿಸಿದರೆ, ಮನುಷ್ಯ ಯಾವ ಪ್ರಾಣಿಯ ಮುಂದೆ ದುರ್ಬಲವಾಗಿ ಕಾಣುತ್ತಾನೋ, ಅದಕ್ಕೆ ಶರಣಾಗಿ ಆರಾಧಿಸಲು ಶುರು ಮಾಡಿಬಿಡುತ್ತಾನೆ ಎಂಬ ಅಂಶ. ಅದಕ್ಕಾಗಿಯೇ,



